ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರು ಮತ್ತು ನೈಪಂಡಿಯರಿ ಪಥವಿಧರ ಸಮಸ್ಯೆಯೇ ಸರ್ಕಾರಕ್ಕೆ ಭಾರೀ ಸಮಸ್ಯೆಯಾಗಿರುವುದರಿಂದ ನಿರುದ್ಯೋಗಿ ಪಥವೀಧರರ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿಯಿದ್ದರೂ ಸಹ ವಿಕಕಾಲದಲ್ಲಿ ಎಲ್ಲಾ ನಿರುದ್ಯೋಗಿ ಪಥವೀಧರರಿಗೆ ಸರ್ಕಾರದ ಇಲಾಖೆಗಳಲ್ಲಿ ಹುದ್ದೆಗಳನ್ನು ಒದಗಿಸಲು ಸಾಧ್ಯವಾಗಲಾರದು.

ಆದುದರಿಂದ ನಿರುದ್ಯೋಗಿ ಪಥವೀಧರರು ಸ್ವಯಂ ಉದ್ಯೋಗವನ್ನು ಸ್ಥಾಪಿಸಲು ಸರ್ಕಾರವು ಕಲ್ಪಿಸಿರುವ ಹಲವಾರು ಪ್ರಯೋಜನಗಳ ನೆರವನ್ನು ಪಡೆದು ಸ್ವಾವಲಂಬಿಗಳಾಗಿ ಉನ್ನತ ಜೀವನವನ್ನು ಸಾಗಿಸಲು ಕಲಿಯಬೇಕು.

(೯) ಮಂಗಳೂರಿನಲ್ಲಿ ತೈಲ ಸಂಸ್ಕರಣಾಗಾರ ಮತ್ತು ಪೆಟ್ರೋ ಕೆಮಿಕಲ್ ಕಾಂಪ್ಲೆಕ್ಸ್‌ನ್ನು ಸ್ಥಾಪಿಸುವುದು

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ರಾಜ್ಯದ ಜನತೆಯು ಬಹುಕಾಲದ ಈ ಬೇಡಿಕೆಗೆ ಮಾನ್ಯತೆ ನೀಡಿ ಮಂಗಳೂರಿನಲ್ಲಿ ತೈಲ ಸಂಸ್ಕರಣಾಗಾರ ಮತ್ತು ಪೆಟ್ರೋ ಕೆಮಿಕಲ್ ಕಾಂಪ್ಲೆಕ್ಸ್ ಸ್ಥಾಪಿಸಲು ಮಂಜೂರಾತಿ ದೊರೆತಿರುವುದಾಗಿ ಕೇಂದ್ರಸರ್ಕಾರದ ಮಾನ್ಯ ಸಹಾಯಕ ವಿತ್ತ ಮಂತ್ರಿಯವರು ಪ್ರಕಟಿಸಿರುವುದು ಪತ್ರಿಕೆಗಳಲ್ಲಿ ವರದಿ ಆಗಿದೆ. ಆವಶ್ಯಕವುಳ್ಳ ಸ್ಥಳವನ್ನು ರಾಜ್ಯಸರ್ಕಾರ ಒದಗಿಸಿದ ನಂತರ ಈ ಹೊಸ ಉದ್ದಿಮೆಗಳು ಸ್ಥಾಪನೆ ಆಗಬೇಕಾಗಿರುವುದರಿಂದ ಬೇಕಾದ ಜಾಗ ನೀಡಲು ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಈ ಬಗ್ಗೆ ನಾಳೆ ಹೇಳುತ್ತೇನೆ.

(೧೦) ರಾಜ್ಯದಲ್ಲಿ ನಡೆಯುತ್ತಿರುವ ದರೋಡೆಗಳ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.—ಕಳೆದ ಒಂದು ವಾರದಿಂದ ಪ್ರತಿದಿನ ಪತ್ರಿಕೆಗಳಲ್ಲಿ ಡಕಾಯಿತಿಗಳ, ದರೋಡೆಕೋರರ ಕಳ್ಳತನಗಳ ಬಗ್ಗೆ ವರದಿಗಳು ಪ್ರಕಟವಾಗಿವೆ. ಹಾಗೂ ಬೆಂಗಳೂರು ಮತ್ತು ಬಳ್ಳಾರಿಗಳಲ್ಲಿ ದರೋಡೆಕೋರರ ಹಾವಳಿ ಹೆಚ್ಚಾಗಿದೆ. ಅನೇಕರನ್ನು ತೀಪ್ರವಾಗಿ ಗಾಯಗೊಳಿಸಿದ್ದಾರೆ. ಮಕ್ಕಳು, ಹೆಂಗಸರನ್ನು ಬಿಡದು ಇದ್ದುದ್ದನ್ನೆಲ್ಲಾ ದೋಚಿಕೊಂಡು ಹೋಗುತ್ತಿದ್ದಾರೆ. ಸರ್ಕಾರದ ಪೋಲೀಸ್ ಇಲಾಖೆ ಇದನ್ನು ಕಂಡುಹಿಡಿಯಲು, ಮಟ್ಟಹಾಕಲು ವೈಫಲ್ಯತೆ ತೋರಿದೆ. ಪರಿಸ್ಥಿತಿ ಹದಗೆಡುತ್ತಿರುವುದರಿಂದ, ಸರ್ಕಾರದ ಹೇಳಿಕೆ ಅತ್ಯಗತ್ಯ. ಗೃಹಸಚಿವರು ಇದರ ಬಗ್ಗೆ ಹೇಳಿಕೆ ನೀಡ ಬೇಕಾಗಿ ವಿನಂತಿ. (ಇಂದಿನ, ನಿನ್ನೆಯ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ ಪತ್ರಿಕೆಗಳಲ್ಲಿ ಕೆಲವು ಘಟನೆಗಳ ಬಗ್ಗೆ ವರದಿಯಾಗಿದೆ.)

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ವಿಚಾರವನ್ನು ಗೃಹಸಚಿವರ ಗಮನಕ್ಕೆ ತಂದು ಹೇಳಿಕೆ ಕೊಡಲಿಕ್ಕೆ ತಿಳಿಸುತ್ತೇನೆ.

(೧೧) ಮಡಿಕೇರಿ ನಗರದಲ್ಲಿ ಗೃಹ ನಿರ್ಮಾಣ ಮಂಡಲಿಯವರು ಕಟ್ಟಿಸಿರುವ ಮನೆಗಳು

ಶ್ರೀಮತಿ ಸುಮಾವಸಂತ.—ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಮಡಿಕೇರಿ ನಗರದಿಂದ ಎರಡು ಮೈಲಿ ದೂರದ ಪ್ರದೇಶದಲ್ಲಿ ಸುಮಾರು ೭ ಲಕ್ಷದ ೨೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ೭೦ ಮನೆಗಳನ್ನು ನಿರ್ಮಿಸಿದೆ. ಈ ಮನೆಗಳನ್ನು ಮಧ್ಯಮವರ್ಗ, ಅಲ್ಪ ವರಮಾನ, ಕನಿಷ್ಟ ವರಮಾನ ದವರಿಗಾಗಿ ನಿರ್ಮಿಸಲಾಗಿದ್ದು, ನಿರ್ಮಾಣದ ಕಾರ್ಯ ಮುಗಿದು, ಇಲ್ಲಿಗೆ ಸಾಲ್ಕು ವರ್ಷಗಳು ಕಳೆದಿದ್ದರೂ, ಸಹ ಮನೆ ಬೇಕೆಂದು ಕೇಳಿ ಕೇಡ ೨೫ರಷ್ಟು ಹಣ ಮುಂಗಡ ಕಟ್ಟಿ ಕಾಯುತ್ತಿರುವ ೫೦ ಮಂದಿಗೆ ಇದುವರೆಗೆ ಮನೆ ಬಿಟ್ಟುಕೊಟ್ಟಿಲ್ಲ. ಕಟ್ಟಿರುವ ಈ ಮನೆಗಳಿಗೆ ಕಳಪೆ ದರ್ಜೆ ಸಾಮಗ್ರಿಗಳನ್ನು ಬಳಸಿದ್ದು, ಇದುವರೆಗೆ ಈ ಮನೆಗಳಿಗೆ ನೀರು, ಮತ್ತು ವಿದ್ಯುತ್ ಸೌಲಭ್ಯಗಳನ್ನು ಒಳಪಡಿಸಿರುವುದಿಲ್ಲ. ಈ ವಿಳಂಬದಿಂದಾಗಿ ೧೯೬೫ರಲ್ಲಿ ೭೫ ಸಾವಿರ ರೂಪಾಯಿಗಳು ಕ್ರಯವಿದ್ದ ಮಧ್ಯಮ ವರ್ಗದ ಮನೆಗಳಿಗೆ ೧೯೮೭ಕ್ಕೆ ೯೦ ಸಾವಿರದಿಂದ ಒಂದು ಲಕ್ಷ ರೂಪಾಯಿಗಳಿಗೆ ಏರಿದೆ. ಇದೇ ರೀತಿ ಅಲ್ಪ ವರಮಾನದವರಿಗೆ ನಿರ್ಮಿಸಿರುವ ಮನೆಗಳ ವೆಚ್ಚ ೪೮ ಸಾವಿರ, ಕನಿಷ್ಟ ವರಮಾನದವರು ಮನೆಗಳಿಗೆ ೩೫ ರಿಂದ ೩೫ ಸಾವಿರ ರೂಪಾಯಿಗಳು ಹೆಚ್ಚಿರುತ್ತದೆ. ಇದರಿಂದ ಗೃಹ ಮಂಡಲಿಯ ಮೂಲ ಉದ್ದೇಶಕ್ಕೆ ಭಂಗ ಬಂದಿದ್ದೇ ಅಲ್ಲದೆ, ಕಡಿಮೆ ವೆಚ್ಚಕ್ಕೆ ದೊರೆಯಬೇಕಾದ ಮನೆಗಳ ವೆಚ್ಚ ಹೆಚ್ಚು ಬಡವರಿಗೆ ಹೊರೆಯಾಗಿವೆ, ಆಷ್ಟೇ